REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 10 | ISSUE - 12 | SEPTEMBER - 2021

# ತತ್ವಪದಗಳು

ಡಾ:ಕಾಳಿಂಗ ಡಿ ಗೊಳಸಂಗಿ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಚ ಚ ಹೆಬ್ಬಾಳ ಸರಕಾರಿ ಪ್ರಥಮ ದರ್ಜೆ ಕಾಲೇಜು, ಗೊಳಸಂಗಿ.



ತತ್ವಪದಗಳನ್ನು ಸಾಮಾನ್ಯವಾಗಿ ಸ್ವರ ವಚನ, ಕೈವಲ್ಯ ಪದ್ಯ, ಅನುಭಾವ ಸಾಹಿತ್ಯ ಎಂದು ಗುರುತಿಸಲಾಗಿದೆ. ಈ ಬಗೆಯನ್ನು ಕನ್ನಡದಲ್ಲಿ ವಚನಕಾರರ ಕಾಲದಿಂದ ಹಿಡಿದು ೧೯ನೇ ಶತಮಾನದಿಂದೀಚೆಗೆ ಸ್ಪಷ್ಟವಾಗಿ ಅದರ ರೂಪ ಸ್ವರೂಪವನ್ನು ಗುರುತಿಸುವ ಪ್ರಯತ್ನ ನಡೆದಿದೆ.

ನೆಲ ಮೂಲ ಸಂಸ್ಕೃತಿಯಿಂದ ಹುಟ್ಟಿಬಂದ ತತ್ವಪದಗಳನ್ನು ಮಾನವೀಯ ನೆಲೆಗಟ್ಟಿನ ಮೇಲೆ ಮನುಕುಲದ ಮನ ಮೈಲಿಗೆ ತೊಳೆಯಬಲ್ಲ, ವಾಸ್ತವ ಬದುಕಿಗೆ ಒರೆಗಲ್ಲಾಗಿ ತತ್ವಸಿದ್ಧಾಂತ, ನೀತಿ ನಿಯಮ ರೂಪಿಸುವವುಗಳಾಗಿವೆ. ಗ್ರಾಮೀಣ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಗೀತಪ್ರಕಾರದಷ್ಟೇ ಪ್ರಚಲಿತವಿರುವ ತತ್ವಪದಗಳು ಲೌಕಿಕ ಅನುಭವದೊಂದಿಗೆ ಅಲೌಕಿಕ ಅನುಭಾವವನ್ನು ಹಾಡಿನ ಮೂಲಕ ಅಭಿವ್ಯಕ್ತಿಸುವ ಪದಗಳಾಗಿವೆ. "ದಂಡಿಗೆ ದಾಸರು" ಹಾಗೂ ಹೊಲಿದಾಸರು ಎಂಬ ವೃತ್ತಿ ಗಾಯಕರ ಎರಡು ಪಂಗಡಗಳಿದ್ದು ದಂಡಿಗೆ ದಾಸರು ಕಟ್ಟಿಗೆಯ ತಂಬೂರಿ ಹಿಡಿದವರು ಹಾಗೂ ಸ್ಪೃಶ್ಯರು ಹೊಲಿದಾಸರು ಏಕತಾರಿ ಹಿಡಿದವರು ಹಾಗೂ ಅಸ್ಪೃಶ್ಯರು ಇವರಿಬ್ಬರೂ ಸಂತೆ, ಜಾತ್ರೆ, ಹಬ್ಬ ಹರಿದಿನ, ಮದುವೆಗಳಲ್ಲಿ ಕಾಣಸಿಗುತ್ತಾರೆ. ಜನ ಸಮೂಹಗಳು ಸೇರಿದಲ್ಲಿ ಈ ತತ್ವಪದ ಹಾಡುವ ಕಾಯಕದವರು ಎಲ್ಲೆಡೆಗೂ ಹರಿದಾಡುವ ಧರ್ಮತತ್ವ ಪ್ರಸಾರ ಮಾಡುವ ನಿಜ ಜಂಗಮರಿವರು"೧

ಶಬ್ದಕೋಶದ ಪ್ರಕಾರ 'ತತ್ವ' ಎಂದರೆ ಸಿದ್ಧಾಂತ, ಪರಮಾತ್ಮ, ಮತ್ತು ನಿಜಸ್ಥಿತಿ ಎಂದರ್ಥವಾಗುತ್ತದೆ. 'ಪದ' ಎಂದರೆ ಹಾಡು ಎಂದರ್ಥ. ಹೀಗಾಗಿ ಪರಮಾತ್ಮನಿಗೆಸಂಬಂಧಿಸಿದ ಸಿದ್ಧಾಂತವನ್ನು ಹಾಡಿನ ಮೂಲಕ ಅಭಿವ್ಯಕ್ತಿಸುವ ಕ್ರಿಯೆ ತತ್ವಪದವಾಗುತ್ತದೆ. ಇವುಗಳನ್ನು ಪರಮಾರ್ಥ ಪದಗಳೆಂದೂ ಕರೆಯುವರು. ಒಂದರ್ಥದಲ್ಲಿ ಅನುಭವಿಗಳ ಅನುಭಾವದಿಂದ ಹೊರಹೊಮ್ಮಿದ ಮಾತೇ ತತ್ವ, ಈ ತತ್ವವು ರಾಗ ಲಯ ಮತ್ತು ಗೇಯತೆಯನ್ನೊಳಗೊಂಡು ಹಾಡಿದಾಗ ತತ್ವಪದವಾಗಿ ರೂಪಗೊಂಡವು.

ಕಡಕೋಳ ಮಡಿವಾಳಪ್ಪಾದಿಯಾಗಿ ಕೆಲವರ ಪದಗಳನ್ನಿಲ್ಲಿ ಅವಲೋಕಿಸಬಹುದು. ಕಲಬುರ್ಗಿ ಜಿಲ್ಲೆಯ ಅಫಜಲಪೂರ ತಾಲೂಕಿನ ಬಿದನೂರು ಎಂಬ ಗ್ರಾಮದಲ್ಲಿ ೧೭೮೦ರಲ್ಲಿ ಜನಿಸಿದ ಕಡಕೋಳ ಮಡಿವಾಳಪ್ಪನವರು ಬಾಲ್ಯದಿಂದಲೂ ಪ್ರತಿಭಾನ್ವಿತರು, ಪ್ರತಿಭಟನಾತ್ಮಕ ಮನೋಭಾವ ಹೊಂದಿದವರಾಗಿದ್ದರು. ಅವರು ಬಳಸಿದ ಭಾಷೆಯನ್ನು ಗಮನಿಸಿದಾಗ ಜಾತಿ, ಮತ, ಮೌಢ್ಯಗಳನ್ನು ನಿರಾಕರಿಸಿ ಮಾನವೀಯತೆಗೆ ಮಿಡಿದ ಅವರು ಭಕ್ತಿ, ಜ್ಞಾನ, ವೈರಾಗ್ಯಗಳ ತ್ರಿವೇಣಿ ಸಂಗಮವಾಗಿ ಕಂಗೊಳಿಸಿದ್ದಾರೆ.

ನೀನು ಯಾರು ನೀನು ಎಲ್ಲಿಂದ ಬಂದಿ
ನೀನಿರುವಾಗ ಇತ್ತೇನು ಇಷ್ಟೆಲ್ಲ ಮಂದಿ ಎಂಬಲ್ಲಿ ೧

ಮಡಿವಾಳಪ್ಪನವರ ಈ ಪದದ ಸಾಲುಗಳು ಸಂಸಾರಿಕ ಬದುಕಿನ ನಶ್ವರತೆ ಪಾರಮಾರ್ಥದೆಡೆಗಿನ ಮಿಡಿತ ಎತ್ತಿ ತೋರಿಸುತ್ತದೆ. ಜನನ ಮರಣಗಳ ಕುರಿತು ಪರ್ಷಿಯಾದ ಸೂಫಿ ಓಲಾಲ್ ಉದ್ದಿನ ರೂಮಿ ಅವರ ಪದ್ಯವನ್ನಿಲ್ಲಿ ಗಮನಿಸುತ್ತ, ಡಾ. ಬಿ. ಶಿವಪ್ಪ ಅವರ ಇದೇ ಪದ್ಯದ ಕನ್ನಡ ಅನುವಾದವನ್ನು ಗಮನಿಸಬಹುದು.

“A stone I died and rose a Plant
A plant I died and rose an animal
I died an animal and was born a man
Why should I fear? what have I lost by death?”೨

ಕಲ್ಲಾಗಿ ಸತ್ತೆ ಗಿಡವಾಗಿ ಬೆಳೆದೆ
ಗಿಡವಾಗಿ ಸತ್ತೆ ಪ್ರಾಣಿಯಾಗಿ ಬಂದೆ
ಪ್ರಾಣಿಯಾಗಿ ಸತ್ತೆ ಮಾನವನಾಗಿ ಹುಟ್ಟಿದೆ
ಏತಕ್ಕೆ ಭಯ ಪಡವಿ?ಸಾವಿನಿಂದ
ಕಳೆದುಕೊಂಡಿದ್ದಾದರೂ ಏನಿದೆ?

ಈ ಭೂಮಿಗೆ ಬಂದ ನೀನು ಯಾರು ಅನ್ನುವುದೇ ನಿನಗೆ ಗೊತ್ತಿಲ್ಲ ಎಲ್ಲಿಂದ ಬಂದಿ ಅನ್ನುವದು ಗೊತ್ತಿಲ್ಲ ನೀ ಬಂದ ಮೇಲೆ ಮಾತ್ರ ನಿನಗೆ ಇಷ್ಟೆಲ್ಲ ಬಂಧು ಬಳಗ ಬರುವ ಪೂರ್ವದಲ್ಲಿ ಯಾರೂ ಇಲ್ಲ ಎಂದು ಹೇಳುವ ಪದದ ಸಾಲುಗಳು ಆತ್ಮ ಅಮರ ದೇಹ ನಶ್ವರ ಎಂದು ಎತ್ತಿ ಹೇಳುತ್ತ ನಿನ್ನ ಅರಿವೇ ನಿನಗೆ ಗುರು ಎಂದು ಎಚ್ಚರಿಸಿದ್ದಾರೆ. ನಿನ್ನ ತಿಳಿಯದ ನೀನು ಯಾರು? ಎಂದು ಪ್ರಶ್ನಿಸುತ್ತಾರೆ.
ಸಾಮಾಜಿಕ ವ್ಯವಸ್ಥೆಯಲ್ಲಿನ ಅನಿಷ್ಟತೆಯನ್ನು ಕಂಡು.

ಊರ ನರಕವ ತಿಂದು ಬರ್ಯಾಡಿ ಹಿಂಡುವ ಎಮ್ಮಿಯ
ಹಾಲಿನ ಸವಿಯ ನೋಡಿರಣ್ಣ
ಅದರ ಹೈನವ ತಿಂದು ಗಂಡಾಗಿ ಕುಳಿತೀರಿ
ಶೀಲ ಎಲ್ಲೈತಿ ಹೇಳಿರಣ್ಣ.

ಎಲ್ಲೆಲ್ಲೊ ತಿರುಗಿ ಏನೆಲ್ಲ ತಿಂದು ಬೋರಾಡಿ ಬಂದ ಎಮ್ಮೆಯ ಹಾಲು ಹೈನ ತಿಂದು ಶೀಲದ ಮಾತನಾಡುವ ನೀವು, ಯಾವ ನೆಲೆಯಲ್ಲಿ ನಿಂತು ಮಾತನಾಡಿತ್ತೀರಿ ಎಂದು ಪ್ರಶ್ನಿಸುತ್ತಾರೆ. ಇದನ್ನೇ ಸರ್ವಜ್ಞ

ಜಾತಿ ಹೀನನ ಮನೆ ಜ್ಯೋತಿ ತಾ ಹೀನವೆ
ಜಾತಿ ವಿಜಾತಿ ಎನಬೇಡ ದೇವನೊಲಿದಾತನೆ
ಜಾತ ಸರ್ವಜ್ಞ ಎಂದು ಹೇಳಿದ್ದು.

ಯಾವ ಕಡಕೋಳ ಮಡಿವಾಳಪ್ಪನವರು ಅವಮಾನ ನಿಂದೆಗೆ ಗುರಿಯಾಗಿದ್ದರೋ ಅವರ ಬಾಯಿಂದ ಹೊರಹೊಮ್ಮಿದ ಪದಗಳು ಮೌಢ್ಯತೆಯ ಮುಂಗಾಲು ಮುರಿಯುವಂತೆ ವ್ಯಕ್ತವಾಗಿವೆ.

ಮುಟ್ಟಾಂದ ಮೂರು ದಿನಕ ಹುಟ್ಟಿ ಬಂದಿ ನೀ
ಮುಟಚಟ ಎಲ್ಲೈತಿ ಹೇಳಿರಣ್ಣ.

ಎಂಬುದಾಗಲೀ ಐತನದ ಮಾತೆಕೋ ಸುಮ್ಮ ತಾಯಿತಂದಿ ಮೈಥುನದಿಂದ ಹುಟ್ಟಿಬಂದಿ ಹುಮ್ಮ ಎಂಬ ಅವರ ಈ ಪದಗಳು ಅಂದಕನ ಕೈ ಅಂದಕನು ಹಿಡಿದು ದಾರಿ ತೋರಲು ಪ್ರಯತ್ನಿಸಿದಂತಿದೆ.

ಮಡಿವಾಳಪ್ಪನವರು ತಮ್ಮ ಕಾಲ ಪರಿಸರದ ಜೀವನ ಕ್ರಮವನ್ನು ಕಂಡು.

“ಪುಢಾರಿ ಪುಢಾರಿ ಮಂದಿ ಹೋಗಿ ದರೋಡಿ ಮಾಡ್ಯಾರೊ
ಪುಂಡ ಪುಂಡ ಮಂದಿ ಹೋಗಿ ಚಂಡಿ ಆಡ್ಯಾರೋ
ಬಡವರ ಮ್ಯಾಲ ಕಟ್ಲೆಹೊರೆಸಿ ಕೋರ್ಟಕಳಿಸ್ಯಾರೋ

ಇವರು ನಾಚಿಕೆ ಎಂಬ ಹುರಿಯ ಮಾಡಿ ತೊಲಗಿಸುತ್ತಾರ್ಯರೊ"

ಅವರ ಈ ಪದದ ಸಾರಾಂಶ ವಾಸ್ತವ ಬದುಕಿಗೆ ಹಿಡಿದ ಕೈಗನ್ನಡಿಯಾಗಿ ತೋರುತ್ತದೆ. ತತ್ವಪದಕಾರರಲ್ಲಿಯೇ ಕಾಲಮಾನ ಪರಸ್ಥಿತಿಗೆ ಅನುಗುಣವಾಗಿ ಯಾವುದೇ ಮೂಲಾಜು ಇಲ್ಲದೇ ಸೋಗಲಾಡಿತನದ ಚಿತ್ರಣವನ್ನು ಬಿಡಿಸಿಡುವ ಪ್ರಯತ್ನ ಮಾಡಿದ್ದಾರೆ. ಅವರ ಬದುಕೇ ತೆರದ ಪುಸ್ತಕವಾಗಿತ್ತು ಕಾರಣ ಅವರ ಅಂತರಂಗದ ಅಭಿವ್ಯಕ್ತಿಯ ಅನುಭಾವದ ಉಕ್ತಿಗಳಾಗಿ ಇಂತಹ ತತ್ವಪದಗಳು ಅವರಿಂದ ರಚೆಗೆಗೊಂಡಿರುವದು ಅಧ್ಯಯನದಿಂದ ತಿಳಿದು ಬರುತ್ತದೆ.

ಶಿಶುನಾಳ ಶರೀಫರಾಗಲಿ, ಮುಪ್ಪಿನ ಷಡಕ್ಷರಿಯಾಗಲಿ ಸರ್ಪಭೂಷಣ ಶಿವಯೋಗಿಗಳಾಗಲಿ ಇವರ ತತ್ವ ಪದಗಳಲ್ಲಿ ಅರಿವು ಆಚಾರ ಎದ್ದುಕಾಣುತ್ತದೆ. ಅಂತಲೇ ಕಡಕೋಳ ಮಡಿವಾಳಪ್ಪನವರುಸಮಾಜದ ಡೊಂಕನ್ನು ತಿದ್ದಲು ಉಪಮೇಯದ ಮೂಲಕ ವಿವರಿಸುತ್ತ ಕೊನೆಗೆ ಆಧ್ಯಾತ್ಮದ ಅಭಿಪ್ಸೆಯ ಹಿನ್ನೆಲೆಯಲ್ಲಿ,

ಜ್ಞಾನ ಪೂರ್ಣಂ ಜಗಂ ಜ್ಯೋತಿ
ನಿರ್ಮಲವಾದ ಮನವೇ ಕರ್ಪೂರದಾರುತಿ.

ಎಂದು ಅರಹುತ್ತ ಜ್ಞಾನ ಅರಿವು ಎನ್ನುವುದು ಜಗದ ಜ್ಯೋತಿಯಾಗಬಲ್ಲದು, ನಿನ್ನಲ್ಲಿಯ ನಿರ್ಮಲವಾದ ಮನಸ್ಸೇ ಅಂತರಂಗದ ಕರ್ಪೂರವಾಗಿ ಬೆಳಗಬೇಕು ಎಂದು ಮನುಕುಲಕ್ಕೆ ಸಾರಿದರು.

ಹಿಗೆಯೇ ಮುಂದುವರೆದು ತತ್ವಪದಗಳನ್ನು ಅವಲೋಕಿಸುತ್ತ ಹೋದಾಗ ಒಂದೊಂದು ಪದಗಳು ಲೌಕಿಕ ಮತ್ತು ಪಾರಮಾರ್ಥಿಕದ ಬೆಸುಗೆಯೊಂದಿಗೆ ಹೊಸೆದುಕೊಂಡು ವ್ಯಕ್ತಗೊಂಡಿರುವದನ್ನು ಅರಿಯಬಹುದು.

ಧರೆಯ ಭೋಗವ ಮೆಚ್ಚಿ
ವರಮುಕ್ತಿ ಪಡೆಯುದಕ
ರ್ತೀರಾ ಇಲ್ಲೇ ರ್ತಿರಾ

ಈ ಸಾಲುಗಳನ್ನು ಅನುಲಕ್ಷಿಸಿದಾಗ ಇಲ್ಲಿ ಲೌಕಿಕ ಮತ್ತು ಪಾರಮಾರ್ಥಿಕ ನೆಲೆಯನ್ನು ಕಂಡುಕೊಳ್ಳಬಹುದಾಗಿದೆ.

ಧರೆಯ ಭೋಗ - ಲೌಕಿಕ ಭೋಗ ಭಾಗ್ಯಗಳನ್ನು ಪ್ರತಿನಿಧಿಸಿದರೆ ವರಮುಕ್ತಿ – ಎಂಬುದು ಅಲೌಕಿಕ ಶಕ್ತಿಯನ್ನು ಪ್ರತಿನಿಧಿಸುತ್ತದೆ. ಧರೆಯ ಭೋಗ – ಅನುಭವದ ಕಾವ್ಯವಾಗಿ ಗೋಚರಿಸಿದರೆ

ವರಮುಕ್ತಿ – ಅನುಭಾವದ ಪದವಾಗಿ ಮೂಡಿಬರುತ್ತದೆ.

ಧರೆಯ ಭೋಗ ಲೋಕಜ್ಞಾನವಾದರೆ, ವರಮುಕ್ತಿ ಲೋಕೋತ್ತರವಾದ ಜ್ಞಾನ.

ಲೋಕ ಜ್ಞಾನದಲ್ಲಿ ಭಾವವಿದೆ. ಲೋಕೋತ್ತರ ಜ್ಞಾನದಲ್ಲಿ ಆಸರೆಯಿದೆ. (ಅದೇ ದೇವ, ದೈವ ಎನ್ನುವ ಪರಿಕಲ್ಪನೆ) ಭಾವ ಬದುಕಿಗೆ ಸಂಬಂಧಿಸಿದ್ದು ಆನಂದವಾದರೆ, ಜೀವ ಜಗತ್ತಿಗೆ ಸಂಬಂಧಿಸಿದ್ದು, ಪರಮಾನಂದ ಜೀವಾತ್ಮನಲ್ಲಿ ಪರಮಾತ್ಮನ ನೆಲೆಯಿದೆ.

ಡಿಂಭದೊಳಗೆ ಒಂದೇ ಪ್ರಾಣಾ ಕಂಭಸೂತ್ರ ಗೊಂಬಿಯಂತೆ
ಎಂದಿಗಾದರೊಂದು ದಿನ ಸಾವು ತಪ್ಪದೋ ಮನುಜ

ಹೀಗೆ ಒಟ್ಟಾರೆಯಾಗಿ ತತ್ವಪದಗಳನ್ನು ಕುರಿತು ಅವಲೋಕಿಸಿದಾಗ ಲೌಕಿಕದೊಂದಿಗೆ ಪಾರಮಾರ್ಥಿಕದ ಎರಕ ಹೊಯ್ದು ಮೂಡಿರುವ ಪದಗಳಾಗಿ ಗೋಚರಿಸುತ್ತವೆ. ಭೋಗ ಜೀವನದಿಂದ ತ್ಯಾಗ ಜೀವನದಡೆಗೆ ನಡೆಯುವ ಸಂದೇಶ ಈ ಪದಗಳ ಸಾರ. ಅಂತೆಯೇ ಸಂಸಾರವೆಂಬುದನ್ನು ಕುರಿತು.

ಇರಬೇಕು ಇದ್ದು ಇಲ್ಲದಂಗಿರಬೇಕು
ಗೇರು ಹಣ್ಣಿನ ಬೀಜದಂತೆ,
ನೀರಮುಟ್ಟದ ತೈಲದಂತೆ ಇರಬೇಕು ಎಂಬುದೇ ಆಗಿದೆ.

ಹಾಗೆಯೇ ಬುದ್ಧ ಲೌಕಿಕದಿಂದ ಪಾರಮಾರ್ಥದೆಡೆಗೆ ಸಾಗಿದಾಗ ತನ್ನ ಕುದುರೆಗೆ ಹೇಳುವ ಮಾತು ಮನನೀಯವಾಗಿದೆ.

ನಡೆ ಹಯವೆ ನಡೆ ಮುಂದಕೀಗ
ಸಾರವಿಲ್ಲದ ಸತಿಸುತರ ವ್ಯಾಮೋಹದಿಂದಿಂ
ದೂರ ಸಾಗುವೆವು ನಾವು ಮುಂದಕೀಗ
ನಡುರಾತ್ರಿ ಮೀರಿಹುದು ಜಗನಿದ್ರಿಸುತ್ತಿಹುದು
ಗಡಿನಾಡುಗಳ ದಾಟಿ ದೂರ ಸಾಗುವೆವು
ತಡೆಯದೆನ್ನೆನ್ನಿಹ ರಾಜ್ಯಸುಖದಾಶಯಗಳು'

ಎಂಬುವಲ್ಲಿ ಲೌಕಿಕದ ನಶ್ವರತೆ ಅಲೌಕಿಕದ ಅನಂತತೆ ಎದ್ದು ಕಾಣುತ್ತದೆ. ಆತ್ಮನಲ್ಲಿ ಪರಮಾತ್ಮನಿದ್ದಾನೆ. ಎಂಬಲ್ಲಿ ಒಂದು ಆಲಿಕಲ್ಲಿಗೆ ಇನ್ನೊಂದು ಆಲಿಕಲ್ಲನ್ನು ಮಥಿಸಿದಾಗ ಎರಡೂ ಹೇಗೆ ನೀರಲ್ಲಿ ನೀರಾಗಿ ಕರಗಿ ಹೋಗುತ್ತವೆಯೋ ಹಾಗೆ ಆತ್ಮನಲ್ಲಿ ಪರಮಾತ್ಮನಿದ್ದಾನೆ. ಎಂಬ ಅಭೇದ ಕಲ್ಪನೆಯ ನೆಲೆಯಲ್ಲಿ ಮೂಡಿಬಂದ ತತ್ವ ಪದಗಳು ನಮ್ಮ ಬದುಕಿನ ಆದರ್ಶ ನಿಲುವುಗಳಾಗಿ, ಪಾರಮಾರ್ಥಿಕದೆಡೆಗೆ ದಾರಿತೋರುವ ದಿಕ್ಸೂಚಿಗಳಾಗಿವೆ.

## ಆಕರ ಗ್ರಂಥಗಳು

೧.ಹಾಡುಗಬ್ಬ ಸಂಗ್ರಹ : ಪ್ರೊ. ಎನ್.ಕೆ.ರಾಮಚಂದ್ರಪ್ಪ ಸಿದ್ದಲಿಂಗೇಶ್ವರ ಪ್ರಕಾಶನ ಗುಲಗಬರ್ಗಾ ೨೦೦೮
೨.ಶಿಶುನಾಳ ಶರೀಫ ಮತ್ತು ಇತರ ಅನುಭಾವಿಗಳು : ಕಾ.ವೆಂ.ಶ್ರೀನಿವಾಸ ಮೂರ್ತಿ ಕೋಗಿಲೆ ಪ್ರಕಾಶನ, ಚನ್ನಣ ಬಡಾವಣೆ, ಕಾವಲು ಬೈಲಸಂದ್ರ ಬೆಂಗಳೂರು- ೨೦೧೧